ಹಿನ್ನೆಲೆಯಲ್ಲಿ ಈ ಕುದುರೆಮುಖ ಕೈಗಾರಿಕೆಗೆ ನಾವು ಅವಕಾಶ ಮಾಡಿಕೊಟ್ಟಿವು. ಕಳೆದ 30 ವರ್ಷಗಳಲ್ಲಿ ಪಶ್ಚಿಮ ಘಟ್ಟಗಳ ಪರಿಧಿಯಲ್ಲಿ ನಿಸರ್ಗ, ಪ್ರಕೃತಿಯ, ಪರಿಸರದ ಮೇಲೆ ಆಗಿರುವಂತಹ ಕೆಡುಕನ್ನು ನಾವು ಅಳೆಯಬೇಕಾದ ಸನ್ನಿವೇಶ ಮತ್ತೆ ಒದಗಿಬಂದಿದೆ. 30 ವರ್ಷಗಳ ಹಿಂದೆ ನಾವು ಲೀಸ್ ಕೊಟ್ಟಾಗಲೂ ಕೂಡ ಆ ಭಾಗದ ಹಿರಿಯರು ನಮಗೆ ಇದು ಆ ಭಾಗದ ಪರಿಸರದ ಮೇಲಿನ ಹಲ್ಲೆ ಎಂದು ಮುನ್ನೆಚ್ಚರಿಕೆ ಕೊಟ್ಟದ್ದರು. ಇಡೀ ರಾಷ್ಟ್ರದಲ್ಲಿ ಪಶ್ಚಿಮ ಘಟ್ಟಗಳು ಎಲ್ಲೆಲ್ಲಿ ತಮ್ಮ ಅಸ್ತಿತ್ವ ತೋರಿಸಿದೆ ಆ ಎಲ್ಲಾ ಭಾಗಗಳ ಮೇಲೂ ಒಂದು ರೀತಿಯ ಅನಾರೋಗ್ಯಕರ ಪರಿಣಾಮ ಆಗುತ್ತದೆ ಎಂದು ಎಚ್ಚರಿಕೆ ಕೊಟ್ಟದ್ದರು. ಇತ್ತೀಚಿನ ದಿನಗಳಲ್ಲಿ ಪರಿಸರದ ಬಗೆಗಿನ ಕಾಳಜಿ ಕೇವಲ ಒಂದು ರಾಷ್ಟ್ರವಾದ ಆಗುತ್ತಿಲ್ಲ ಇದು ಒಂದು ಜಾಗತಿಕವಾದ ಆಗುತ್ತಿದೆ. ಏಶ್ವದ ಯಾವುದೇ ಭಾಗದಲ್ಲಿ ಪರಿಸರದ ಮೇಲೆ ಆಗುವ ಅಪಘಾತ ಇಡೀ ಮನುಕುಲಕ್ಕೇ ಆಗುವ ಅಪಘಾತ ಎಂಬ ಅಭಿಪ್ರಾಯಗಳು ರೂಪಿತವಾಗುತ್ತಿವೆ. ಅವುಗಳಿಗೆ ನಾವು ಸಾಕಷ್ಟು ಲಕ್ಷ್ಯವನ್ನೂ ಕೂಡ ಕೊಟ್ಟಿದ್ದೇವೆ. ಈ ದೃಷ್ಟಿಯಿಂದ ಈ ಸದನದಿಂದ ಹೊರಗೆ ಬರುವ ಹಲವಾರು ಅಭಿಪ್ರಾಯಗಳನ್ನು ಸರ್ಕಾರ ಗಮನಿಸಿ ಅನಂತರ ಒಂದು ನಿರ್ಧಾರವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಲೀಸ್ ಮಾಡುವುದಕ್ಕೆ ಕೊನೇ ದಿವಸ 24ನೇ ತಾರೀಖಿನಂದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಈ ಬಗ್ಗೆ ಒಂದು ನಿರ್ಧಾರವನ್ನು ಸಚಿವಸಂಪುಟ ತೆಗೆದುಕೊಂಡಿದೆ. ಅದೇನೆಂದರೆ ಮತ್ತೂ ಅಷ್ಟು ಭೂಮಿಯನ್ನು ಇಲ್ಲಿನ ಗಣಿವ್ಯವಹಾರ ಮುಂದುವರೆಸಲು ಕುದುರೆಮುಖದವರು ಏನು ಕೇಳಿದ್ದರು ಅದನ್ನು ನಾವು ತಿರಸ್ಕಾರ ಮಾಡಿದ್ದೇವೆ. ಅದನ್ನು ಮುಂದುವರೆಸಲು ನಾವು ಅವಕಾಶ ಕೊಡುವುದಿಲ್ಲ ಎಂದಿದ್ದೇವೆ. ಈಗ ಪ್ರಶ್ನೆ ಇರುವುದು, ಈಗಿರುವ ಗಣಿಗಾರಿಕೆಯನ್ನು ಕುದುರೆಮುಖದಲ್ಲಿ ಮುಂದುವರೆಸಲು ರಾಜ್ಯ ಸರ್ಕಾರ ಒಪ್ಪಿಗೆ ಕೊಡಬೇಕೇ ಅಥವಾ ನಮ್ಮ ಅನುಭವದ, ಸಾರ್ವಜನಿಕ ಪ್ರತಿಕ್ರಿಯೆಗಳ, ಪರಿಸರದ ಬಗ್ಗೆ ಹೇಗೆ ನಮ್ಮ ಲೆವಲ್ ಎತ್ತರವಾಗುತ್ತಿದೆ ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇದರ ಬಗ್ಗೆ ಒಂದು ನಿರ್ಣಯವನ್ನು ಅತಿ ಶೀಘ್ರದಲ್ಲೇ ತೆಗೆದುಕೊಳ್ಳುತ್ತದೆಂದು ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ತಿಳಿಸಬಯಸುತ್ತೇನೆ.

ಆ. ಚಿಂಚೋಳಿಯಲ್ಲಿ ಶಿಶುಗಳ ಮಾರಾಟ ಪ್ರಕರಣ.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೇ, ಇದೇ ಅಧಿವೇಶನದ ಮೊದಲ ಭಾಗದಲ್ಲಿ ಚಿಂಚೋಳಿ ಶಾಸಕ ಮಾನ್ಯ ಕೈಲಾಸನಾಥ ಪಾಟೀಲರು ಒಂದು ಗಂಭೀರ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದರು. ಚಿಂಚೋಳಿಯಲ್ಲಿ ಶಿಶುಗಳ

ಮಾರಾಟವಾಗುತ್ತಿದೆ, ಅದಕ್ಕೊಂದು ಅಂತರರಾಷ್ಟ್ರೀಯ ಜಾಲವಿದೆ, ಹಣಕ್ಕಾಗಿ ತಾವು ಹುಟ್ಟಿಸಿದ ಮಕ್ಕಳನ್ನೇ ಮಾರುತ್ತಿದ್ದಾರೆಂದು ಪ್ರಸ್ತಾಪಿಸಿದ್ದರು. ಅದಾದಮೇಲೆ ಸರ್ಕಾರದವರು ವಿಭಿನ್ನ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಖರ್ಗೆಯವರು ಅಲ್ಲಿಗೆ ಹೋಗಿ ಬಂದಿದ್ದಾರೆ, ಒಂದು ಮಾತು ಹೇಳಿದ್ದಾರೆ. ಮಾನ್ಯ ಸಮಾಜಕಲ್ಯಾಣ ಸಚಿವರು ಅಲ್ಲಿಗೆ ಹೋಗಿ ಬಂದು ಒಂದು ಹೇಳಿಕೆ ಕೊಟ್ಟಿದ್ದಾರೆ. ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೂ ಹೋಗಿಬಂದಿದ್ದಾರೆ. ವಿರೋಧ ಪಕ್ಷದ ನಾಯಕರೂ ಹೋಗಿ ಬಂದಿದ್ದಾರೆ, ನಾನೂ ಹೋಗಿ ಬಂದಿದ್ದೇನೆ. ಪ್ರಶ್ನೆ ಏನಿದೆ ಅಂದರೆ ಈ ವಿಚಾರವನ್ನು ಸಿಓಡಿ ತನಿಖೆಗೆ ಕೊಟ್ಟಿದ್ದಾರೆಂದು ಸಚಿವರು ಹೇಳಿದ್ದಾರೆ. ಈ ಮಧ್ಯೆ ಒಬ್ಬ ಉನ್ನತ ಮಟ್ಟದ ಡಿಜಿಪಿ ಮಟ್ಟದ ಅಧಿಕಾರಿಯನ್ನು ಅವರು ಇನ್ನೊಂದೆರಡು ತಿಂಗಳಲ್ಲಿ ನನಗೆ ಗೊತ್ತಿರುವಂತೆ ರಿಟೈರಾಗುತ್ತಿದ್ದಾರೆ. ಇದನ್ನು ತನಿಖೆ ಮಾಡಲು ಅವರನ್ನು ಎನ್‌ಕ್ವೈರಿ ಆಫೀಸರ್ ಎಂದು ಮಾಡಿದ್ದೇವೆ. ಅಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಏನಿದೆ ಅದನ್ನು ಇಂಪ್ಲೂ ಮಾಡಲು ಒಬ್ಬ ಡಿಜಿಪಿಯನ್ನು ನಾವು ನೇಮಕಮಾಡಿದ್ದೇವೆಂದು ಅವರು ಸಮರ್ಥನೆ ಮಾಡಿಕೊಂಡಿದ್ದಾರೆ. ಆಡಳಿತ ದೃಷ್ಟಿಯಿಂದ ಏನಾದರೂ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಕಳೆದ ಒಂದು ತಿಂಗಳಿಂದ ಅವರು ಗುಲ್ಬರ್ಗಕ್ಕೂ ಹೋಗಿಲ್ಲ, ಚಿಂಚೋಳಿಗೂ ಹೋಗಿಲ್ಲ ಕೊಂಜಾವರಂಗೂ ಸಹಿತ ಹೋಗಿಲ್ಲ. ಈ ಮಧ್ಯೆ ನಮ್ಮ ಮಹಿಳಾ ಮಕ್ಕಳ ಕಲ್ಯಾಣ ಸಚಿವರಾದ ಶ್ರೀಮತಿ ಮೋಟಮ್ಮನವರು ಹೈದಾರಾಬಾದಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಇದರಲ್ಲಿ ಯಾವುದೇ ರೀತಿ ಶಿಶುಗಳ ಮಾರಾಟವಾಗಿಲ್ಲವೆಂದು. ಮಾನ್ಯ ಖರ್ಗೆಯವರು ಹೇಳಿದ್ದಾರೆ, ಕೆಲವು ರಾಜಕಾರಣಿಗಳ ಬೆಂಬಲ ಇದರ ಹಿಂದೆ ಇದೆ, ಮುಖಂಡರ ಬೆಂಬಲವಿದೆ, ಮತ್ತು ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಕೆಲವು ಆಂಧ್ರ ಪ್ರದೇಶದ ಅಧಿಕಾರಿಗಳ ಕುಟುಂಬದವರೂ ಇದರ ಹಿಂದಿದ್ದಾರೆಂದು ಹೇಳಿದ್ದಾರೆ. ಅಧ್ಯಕ್ಷರೇ, ನಾನು ಶೂನ್ಯವೇಳೆಯಲ್ಲಿ ಈ ಪ್ರಶ್ನೆ ಕೇಳಲು ಕಾರಣವೇನೆಂದರೆ ನಾವು ಅಲ್ಲಿ ಹೋಗಿ ಸ್ವತಃ ನೋಡಿದಾಗ ಹೆಂಗಸರಿಗೆ 10 ರೂಪಾಯಿ ಕೂಲಿ, ಗಂಡಸರಿಗೆ 15ರಿಂದ 20 ರೂಪಾಯಿ ಕೂಲಿ ಸಿಗುತ್ತದೆ. ಈ ಪ್ರಕರಣ ಇವತ್ತೇನೂ ನಡೆದದ್ದಲ್ಲ ಹಲವಾರು ವರ್ಷಗಳಿಂದ ನಡೆಯುತ್ತಾ ಬಂದಿದೆ. ನಿನ್ನೆ ದಿವಸ ಚಿಂಚೋಳಿಯ ಹೆಣ್ಣುಮಕ್ಕಳ ಪ್ರಾತಿನಿಧ್ಯ ಇರತಕ್ಕ ನಾನ್ ಗವರ್ನಮೆಂಟಲ್ ಸಂಸ್ಥೆಯವರು ಬೆಂಗಳೂರಿಗೆ ಬಂದು, ಸಚಿವರನ್ನು ಭೇಟಿ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ ನಮ್ಮನ್ನೂ ಕಂಡಿದ್ದರು. ನಮಗೆ ಅಲ್ಲಿ ಕೂಲಿ ಸಿಗುತ್ತಿಲ್ಲ, ಅಲ್ಲಿರುವ ಮೈನರ್ ಫಾರೆಸ್ಟ್‌ಗಳನ್ನು ಮಾರಾಟ ಮಾಡಲು ನಮಗೆ ಕೊಡಬೇಕು, ನಾವು ಜೀವನ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಸರ್ಕಾರ ಇದುವರೆಗೂ ಮಾಡುತ್ತೇವೆಂದು ಹೇಳಿದ್ದಾರೆಯೇ ಹೊರತು ಇದುವರೆಗೂ ಮಾಡಿಲ್ಲ. ಹಾಗೇನೆ ಸಿಓಡಿ ತನಿಖೆ ಯಾವ ಹಂತದಲ್ಲಿದೆ

ಎಂಬುದು ನಮಗೆ ಗೊತ್ತಾಗಬೇಕು. ಜೊತೆಗೆ ಅಲ್ಲಿ ಕೂಲಿ ಸಿಗುತ್ತಿಲ್ಲ. ನನ್ನ ತಿಳಿವಳಿಕೆಗೆ ಬಂದಿರುವಂತೆ ಈ ವ್ಯವಹಾರ ಇವತ್ತಿಗೂ ಮುಂದುವರೆದಿದೆ. ಸರ್ಕಾರ ಯಾವುದೇ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಇಂತಹ ಪ್ರಕರಣಗಳು ಮುಂದುವರೆದಿವೆ ಎಂದು ನಾನು ಕೇಳಿದ್ದೇನೆ. ಇದರ ಜೊತೆಗೆ ಸುಮಾರು 330 ಮಕ್ಕಳನ್ನು ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ತನ್ನ ವಶಕ್ಕೆ ತೆಗೆದುಕೊಂಡಿವೆ, ಅವರೆಲ್ಲಿದ್ದಾರೆ, ಅವರ ಗತಿಯೇನು ಎಂಬುದೂ ಗೊತ್ತಾಗಬೇಕಾಗಿದೆ. ಸಿಒಡಿ ತನಿಖೆ ರೀತಿ ಏನಿದೆ ಅದರ ಬಗ್ಗೆ ಈ ಹಂತದಲ್ಲಿ ನಾವು ಕೇಳಲು ಆಗುವುದಿಲ್ಲ. ಆದರೆ ತನಿಖೆಯನ್ನು ಪ್ರಭಾವಗೊಳಿಸುವಂತಹ ಹೇಳಿಕೆಗಳನ್ನು ಅಧಿಕಾರದಲ್ಲಿರುವವರು ಕೊಡಲು ಹೋಗಬಾರದು. ಶಿಕ್ಷಣದ ಮಾರಾಟವೇ ಆಗಿಲ್ಲವೆಂದು ಬಿಟ್ಟರೆ ಅದು ತನಿಖಾಧಿಕಾರಿಗಳ ಮೇಲೆ ಪರಿಣಾಮ ಬೀರುವುದು. ಆದ್ದರಿಂದ ಯಾವ ಘಟ್ಟದಲ್ಲಿದೆ, ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಮಾನ್ಯ ಗೃಹ ಸಚಿವರು ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಅವರು ಹೋದಾಗ ಏನು ಮಾಹಿತಿ ತಂದಿದ್ದಾರೆ, ಪತ್ರಿಕೆಯಲ್ಲಿ ಏನು ಬಂದಿದೆ ಎಂದೆಲ್ಲಾ ಪ್ರಸ್ತಾಪಿಸಿದ್ದಾರೆ. ಆದರೆ ವಾಸ್ತವಿಕ ಮಾಹಿತಿ ಏನಿದೆ ಎಂಬುದನ್ನು ನಾನು ನಾಳೆ ಅಥವಾ ನಾಡಿದ್ದು ಸದನದ ಮುಂದೆ ಒಂದು ಹೇಳಿಕೆ ಮೂಲಕ ಕೊಡುತ್ತೇನೆ.

ಶ್ರೀ ಕೆ.ಎಚ್.ರಂಗನಾಥ್(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಅಲ್ಲಿ ಕಾಡಿದೆ, ಕಾಡಿನಲ್ಲಿ ಕೆಲವು ಮೈನರ್ ಪ್ರೊಡ್ಯೂಸ್ ಇದೆ. ಅದನ್ನು ಇಲ್ಲಿಯವರೆಗೂ ಹರಾಜು ಮಾಡುವ ಪ್ರತೀತಿ ಇತ್ತು. ಅಲ್ಲಿನ ಯಾವ ಪ್ರತಿನಿಧಿಗಳೂ ನನ್ನನ್ನು ಇಲ್ಲಿಯವರೆಗೆ ಭೇಟಿಯಾಗಿಲ್ಲ. ಮಾನ್ಯ ಸದಸ್ಯ ಕೈಲಾಸನಾಥ ಪಾಟೀಲರು ಈ ಬಗ್ಗೆ ನನಗೊಂದು ಪತ್ರ ಬರೆದಿದ್ದರು, ಅದನ್ನು ವಿತರಣೆ ಮಾಡಲು ಅಲ್ಲಿರುವವರಿಗೇ ಕೊಡಬೇಕು ಎಂದು. ನಾನು ಅದನ್ನು ಗಮನಿಸಿ, ಮೊನ್ನೆ ಟೆಂಡರ್ ಕೂಡ ಕರೆದಾಗಿತ್ತು ನಿನ್ನೆನೋ ಮೊನ್ನೆನೋ ಟೆಂಡರ್ ಓಪನ್ ಮಾಡುವ ಪರಿಸ್ಥಿತಿ ಇತ್ತು. ಅವರು ನನ್ನ ಗಮನಕ್ಕೆ ತಂದಾಗ ಅದನ್ನು ನಿಲ್ಲಿಸಬೇಕು ಎಂದು ಹೇಳಿ ನಾನು ಆದೇಶವನ್ನು ಕೊಟ್ಟು ನಿಲ್ಲಿಸಿದ್ದೇನೆ. ಮತ್ತೆ ಅದನ್ನು ಅಲ್ಲಿರುವ ಜನರೇ ಸೊಸೈಟಿಗಳನ್ನು ಮಾಡಿಕೊಂಡು ಅದನ್ನು ಮಾಡುವುದಾದರೆ ಅವರಿಗೆ ಕೊಡಬೇಕು ಎಂದು ಹೇಳಿ ನಾನು ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಒಂದೊಂದು ಸಾರಿ ಏನಾಗುತ್ತದೆ ಎಂದರೆ ಅರಣ್ಯ ಇಲಾಖೆಯವರು ಅಲ್ಲಿರುವ ಜನಗಳನ್ನು ಬಳಸಿಕೊಂಡು ಬೇರೆಯವರೂ ಕೂಡ ಸೊಸೈಟಿ ಮಾಡಿಕೊಂಡು ದುರುಪಯೋಗ ಮಾಡತಕ್ಕದ್ದು ಇದೆ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅಲ್ಲಿರುವ ಜನ ಹೆಚ್ಚಾಗಿ ಲಂಬಾಣಿ ಜನ, ಅವರೇ

ಸೊಸೈಟಿಗಳನ್ನು ಮಾಡಿಕೊಂಡು ಬಳಸುವುದಾದರೆ ಮೈನರ್ ಫಾರೆಸ್ಟ್ ಏನು ಇದೆ, ಅದನ್ನು ಅವರಿಗೆ ಕೊಡಬೇಕು ಎಂದು ಹೇಳಿ ನಾನು ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಆದ್ದರಿಂದ ಆ ದಿಸೆಯಲ್ಲಿ ತೊಂದರೆಯಾಗಲಾರದು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಶಿಶುಗಳ ಮಾರಾಟ ಪ್ರಕರಣದಲ್ಲಿ ಕೆಲವೊಂದು ರಾಜಕೀಯ ಹಿನ್ನೆಲೆಯಿರಬಹುದು ಅಥವಾ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳು ಎಂದು ಹೇಳುವಂಥವರ ಇನ್‌ವಾಲ್ವ್‌ಮೆಂಟ್ ಇದೆ ಎನ್ನುವುದೂ ಇದೆ. ಈಗಾಗಲೇ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ನಮ್ಮ ರಾಜ್ಯದವರು ಅದರಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆಯೇನೂ ಪ್ರಶ್ನೆಯಿಲ್ಲ. ಆದರೆ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಈ ಬೌಂಡರಿಯಲ್ಲಿರುವುದರಿಂದ ಆಂಧ್ರಪ್ರದೇಶದಲ್ಲಿ ಕೆಲವೊಂದು ಹಿತಾಸಕ್ತಿಗಳು ಇರುವುದರಿಂದ ಬಹುಶಃ ಇದನ್ನು ಸಿಬಿಐ ಎನ್‌ಕ್ವೈರಿಗೆ ಕೊಟ್ಟರೆ ಹೇಗೆ? ಇದರ ಬಗ್ಗೆಯೂ ನಮ್ಮ ಗೃಹಮಂತ್ರಿಗಳು ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಧಾರಾಳವಾಗಿ ತೆಗೆದುಕೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್: ತಾವು ಪ್ರಸ್ತಾವನೆಯನ್ನು ಕಳುಹಿಸಬೇಕಲ್ಲಾ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನೇನು ಹೇಳುತ್ತೇನೆ ಎಂದರೆ ಮಾನ್ಯ ಯೂನಿಯನ್ ಹೋಂ ಮಿನಿಸ್ಟರ್‌ರವರು ಬೆಂಗಳೂರಿಗೆ ಬಂದಿದ್ದಾಗ ವಿದ್ಯಾಧರರಾವ್‌ರವರಿಗೆ ಕೆಲವರೆಲ್ಲಾ ಹೋಗಿ ರೆಪ್ರೆಸೆಂಟೇಷನ್ನನ್ನು ಕೊಟ್ಟಿದ್ದಾರೆ. ಅವರು ಸಿಬಿಐ ತನಿಖೆ ಮಾಡುವುದಿಲ್ಲವೆಂದು ಈಗಾಗಲೇ ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಪೋಲೀಸ್‌ನವರ ಬಗ್ಗೆ ನಮಗೆ ಕಾನ್‌ಫಿಡೆನ್ಸ್ ಇದೆ. ಸಿ.ಒ.ಡಿ. ಎನ್‌ಕ್ವೈರಿ ಬಗ್ಗೆ ಯಾರದ್ದು ತಕರಾರೇನೂ ಇಲ್ಲ. ಸಿ.ಒ.ಡಿ. ಎನ್‌ಕ್ವೈರಿ ಬಗ್ಗೆ ನೀವೇನು ಮಾಡಿದ್ದೀರಿ ಎಂದರೆ ಇನ್ನೊಬ್ಬ ಡಿಜಿಪಿ ಯನ್ನು ಅಪಾಯಿಂಟ್ ಮಾಡಿದ್ದೀರಿ. ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರ್, ಒಬ್ಬ ಡಿವೈಎಸ್‌ಪಿ ಮಾಡುವ ಕೆಲಸಕ್ಕೆ ಡಿಜಿಪಿ ಯವರನ್ನು ಏಕೆ ಅಪಾಯಿಂಟ್ ಮಾಡಬೇಕಾಗಿತ್ತು? ಇದು ನನಗೆ ಅರ್ಥವಾಗುತ್ತಿಲ್ಲ. ಅಡ್ಡಿನಿಸ್ಟ್ರೇಟಿವ್ ಕನ್‌ವೀನಿಯೆನ್ಸ್ ಎಂದು ಹೇಳಿ ಅವರಿಗೊಂದು ಪೋಸ್ಟಿಂಗ್‌ನ್ನು ಕೊಡಬೇಕಾಗಿತ್ತು. ಅದಕ್ಕೋಸ್ಕರ ಮಾಡಿದ್ದೇವೆಂದರೆ ನಮ್ಮದೇನೂ ತಕರಾರಿಲ್ಲ. ನಾನು ಏನು ಕೇಳುತ್ತಿರುವುದು ಎಂದರೆ ಇವತ್ತಿಗೂ ಸಹ ಸರ್ಕಾರದ ಮೇಲೆ ನನ್ನ ಆಪಾದನೆ ಏನೆಂದರೆ ಶಿಶುಗಳ ಮಾರಾಟದ ಕೆಲಸ ನಿಂತಿಲ್ಲ. ಅದು ನಡೆಯುತ್ತಾ ಇದೆ. ಇದು ನನ್ನ ಆಪಾದನೆ. ಅದನ್ನು ತಡೆಗಟ್ಟಲಿಕ್ಕೆ ನೀವು ಕ್ರಮ ತೆಗೆದುಕೊಂಡಿಲ್ಲ. ಮತ್ತೆ ಎಫೆಕ್ಟೀವಾಗಿ ಅಲ್ಲಿಂದ ಮಾನ್ಯ ಅರಣ್ಯ ಸಚಿವರಿಗೆ ಬಂದು ಮಾನ್ಯ ಶಾಸಕರು

ರೆಪ್ರಸೆಂಟೇಷನ್ನನ್ನು ಕೊಟ್ಟಿದ್ದಾರೆ. ಅಂದರೆ ಅವರಿಗೆ ಕೂಲಿ ಸಿಗುವುದಕ್ಕೆ ಇನ್ನೂ ಸಹಿತ ಪರ್ಯಾಯ ವ್ಯವಸ್ಥೆಯನ್ನು ಮಾಡಿಲ್ಲ. ತಾವು ಅದೇ ಜಿಲ್ಲೆಯವರು. ಒಂದಲ್ಲ ಎರಡು ಸಾರಿ ಹೋಗಿ ನೋಡಿದ್ದೀರಿ. ಅಲ್ಲಿ ಯಾವ ರೀತಿ ಇದೆ ಎಂದು. ಹತ್ತು ರೂಪಾಯಿ ಕೂಲಿ ಸಿಗುವುದಿಲ್ಲವೆನ್ನುವುದು ತಮ್ಮ ಗಮನಕ್ಕೆ ಬಂದಿದೆ. ಹೀಗಾಗಿ ಅದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಸರ್ಕಾರ ಏನು ಮಾಡಿದೆ? ಎಲ್ಲಾ ಮಂತ್ರಿಗಳೂ ಹೋಗಿ ಬಂದಿದ್ದೀರಿ. ಅಲ್ಲಿ ಏನು ಮಾಡಿದ್ದೀರಿ ಎಂದು ನಾನು ಕೇಳಬಯಸಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಏವರವಾದ ಸ್ಟೇಟ್‌ಮೆಂಟನ್ನು ಮಾಡುತ್ತೇನೆಂದು ಈಗಾಗಲೇ ನಾನು ಹೇಳಿದ್ದೇನೆ. ಅದಕ್ಕಿಂತ ಮುಂಚೆ ಮಾನ್ಯ ಸಿಂಧ್ಯಾರವರಿಗೆ ಹೇಳುವುದಕ್ಕೆ ಇಚ್ಛಿಸುತ್ತೇನೆ. 1971ರಲ್ಲಿ ಆ ಕೊಂಚಾವರಂ ಭಾಗದಲ್ಲಿ ಅಡ್ಡಾಡಿ ಪ್ರಚಾರ ಮಾಡಿದಂಥ ವ್ಯಕ್ತಿಗಳು ನಾವು 1971ರಲ್ಲಿ , ಈಗಲ್ಲ. ಪ್ರತಿ ತಾಂಡಕ್ಕೂ ಕೂಡ ಹೋಗಿ ಜನರನ್ನು ಹುರಿದುಂಬಿಸಿ ಆ ಕಾಲದಲ್ಲಿ ಅವರಿಗೆ ಸರ್ಕಾರದ ಸೌಲಭ್ಯಗಳು ಏನು ಸಿಗುತ್ತವೆ ಎನ್ನತಕ್ಕದ್ದು ನಾನು ಮತ್ತು ಶ್ರೀಮಾನ್ ಧರ್ಮಸಿಂಗ್‌ರವರು ಎಲ್ಲಾ ಕೂಡ ಅಡ್ಡಾಡಿ ಬಂದು ಅದು ಒಂದು ಸಲವಲ್ಲ ಕೊಂಚಾವರಂ ಭಾಗದಲ್ಲಿ ನಾವು ಹತ್ತು ಸಲ ಹೋಗಿರಬಹುದು. ಆದರೆ ಅದಕ್ಕೆ ಅನೇಕ ಕಾರಣಗಳಿವೆ. ಎಲ್ಲವನ್ನೂ ಕೂಡ ಈಗ ಹೇಳಿದರೆ ಅದರ ಬಗ್ಗೆ ವಾದವಿವಾದ ಮಾಡುವುದು ಸರಿಯಲ್ಲ. ಅದಕ್ಕೆ ನಾನು ಸ್ಟೇಟ್‌ಮೆಂಟನ್ನು ಮಾಡುತ್ತೇನೆಂದು ಹೇಳಿದ್ದೇನೆ. ಸ್ಟೇಟ್‌ಮೆಂಟನ್ನು ಮಾಡಿಕೊಡೋಣ. ಹತ್ತುರೂಪಾಯಿ ಕೂಲಿ ಸಿಗುವುದಿಲ್ಲವೆಂದು ಹೇಳಿದರು. ಕೂಲಿಗೆ ಬರುವವರಿದ್ದರೆ ಜಿಲ್ಲಾ ಪಂಚಾಯಿತಿಯಿಂದ ಯಾವ ಯಾವ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಬೇಕೋ ಅದನ್ನು ಮಾಡುತ್ತೇವೆ. ಆ ರೀತಿ ಇಲ್ಲವೇ ಇಲ್ಲವೆಂದರೆ ಬೇಕಾದರೆ ನಾನು ವರದಿ ತರಿಸಿಕೊಂಡು ಇದನ್ನೂ ಕೂಡ ನೋಡುತ್ತೇನೆ.

ಇ) ತುರುವೇಕೆರೆ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿಯಲ್ಲಿನ ಮುಷ್ಕರದ ಬಗ್ಗೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ): ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿರುವ ಸಿಮೆಂಟ್ ಕಾರ್ಖಾನೆ ದಿನಾಂಕ ಎರಡರಿಂದ ಮುಷ್ಕರನಿರತವಾಗಿದೆ. ಆ ಮುಷ್ಕರದ ಒಂದು ಅವಧಿಯಲ್ಲಿ ಅಲ್ಲಿರುವ 'ಮೈಸ್ಮೊ' ಎನ್ನುವ ಶಾಲೆಯನ್ನು ಸುಮಾರು ಒಂದೂವರೆ ತಿಂಗಳಿಂದ ಮುಚ್ಚಿದ್ದಾರೆ. ಅಲ್ಲಿ 1200 ಮಕ್ಕಳು ಓದುತ್ತಿರುವ ಈ ಸಂದರ್ಭದಲ್ಲಿ ಇವತ್ತು ೬ ಮಕ್ಕಳುಗಳೆಲ್ಲಾ ಜೀರಿಪಾಲಾಗಿರತಕ್ಕಂಥದ್ದು ಏನು